# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಗೊಟ್ಟಿಗೆರೆ ವಾರ್ಡ್ ಸಂಖ್ಯೆ: 194

ವಾರ್ಡ್ ಕಛೇರಿಯಲ್ಲಿ ದಿನಾಂಕ: 08-04-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದವರು**

1. ಅಧ್ಯಕ್ಷರು, ಗೊಟ್ಟಿಗೆರೆ, ವಾರ್ಡ್ ಸಮಿತಿ ಬೊಮ್ಮನಹಳ್ಳಿ, ಬೆಂಗಳೂರು.
2. ಆರೋಗ್ಯಾಧಿಕಾರಿಗಳು, ಗೊಟ್ಟಿಗೆರೆ.
3. ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.194, ಗೊಟ್ಟಿಗೆರೆ.
4. ಅರಣ್ಯ ಸಂರಕ್ಷಣಾಧಿಕಾರಿ, ಗೊಟ್ಟಿಗೆರೆ.
5. ತೋಟಗಾರಿಕೆ ಸಹಾಯಕರು, ಗೊಟ್ಟಿಗೆರೆ
6. ಅಸಿಸ್ಟೆಂಟ್ ಸಬ್ಇನ್ಸ್‌ಪೆಕ್ಟರ್ ಟ್ರಾಫಿಕ್
7. ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಕೋಣನಕುಂಟೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆಸ್ಕಾಂ)

**ಸ್ಥಳೀಯ ಸಂಘ ಸದಸ್ಯರು:-**

1. ಅಧ್ಯಕ್ಷರು, ರಾಯಲ್ ಕೌಂಟಿ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ
2. ಅಧ್ಯಕ್ಷರು, ಕ್ಲಾಸಿಕ್ ಆರ್‌ಚರ್ಡ್ಸ್
3. ಅಧ್ಯಕ್ಷರು, ಹಿಮಗಿರಿ ಮೆಡೋಸ್, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ
4. ಅಧ್ಯಕ್ಷರು, ಪರಿವರ್ತನ ಸಂಘ, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್, ಗೊಟ್ಟಿಗೆರೆ
5. ಅಧ್ಯಕ್ಷರು, 7 ನೇ ಬ್ಲಾಕ್, 9 ನೇ ಫೇಸ್, ಜೆ.ಪಿ.ನಗರ

**ಗೈರು ಹಾಜರು:-**

1. ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಾರ್ಯದರ್ಶಿ, ಗೊಟ್ಟಿಗೆರೆ
2. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)
3. ವಾರ್ಡ್ ಸಹಾಯಕ ಅಭಿಯಂತರರು ವಾರ್ಡ್ ನಂ.194, ಗೊಟ್ಟಿಗೆರೆ.

ದಿನಾಂಕ: 08.04.2022 ರಂದು ಮಧ್ಯಾಹ್ನ 3.00 ಗಂಟೆಗೆ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಅಧ್ಯಕ್ಷರು ಸಭೆಯಲ್ಲಿ ಎಲ್ಲರನ್ನು ಸ್ವಾಗತಿಸುತ್ತಾ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

**1. ಕೋವಿಡ್-19 ಸೋಂಕು ಹರಡುವುದನ್ನು ತಡೆಗಟ್ಟುವ ಬಗ್ಗೆ.**

i) ಕೋವಿಡ್-19 ಪ್ರಕರಣಗಳು ವಾರ್ಡ್ ವ್ಯಾಪ್ತಿಯಲ್ಲಿ ಶೂನ್ಯವಿರುವ ಬಗ್ಗೆ ತಿಳಿಸುತ್ತಾ, ವೈದ್ಯಾಧಿಕಾರಿಗಳು ಲಸಿಕಾ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. 12 ರಿಂದ 60 ವರ್ಷದ ವಯಸ್ಸಿನವರು 1 ನೇ ಹಾಗೂ 2 ನೇ ಡೋಸ್ ಲಸಿಕೆಯನ್ನು ಹಾಗೂ 60+ನಾಗರೀಕರು ಬೂಸ್ಟರ್ ಡೋಸ್ ಅನ್ನು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪಡೆಯ ಬಹುದಾಗಿದೆ ಎಂದು ತಿಳಿಸಿದರು.

--ಮು.ತಿ.ನೋ--

Scanned by CamScanner

ii) 20 ಜನರಿಗಿಂತ ಅಧಿಕ ವ್ಯಕ್ತಿಗಳಿದ್ದಲ್ಲಿ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್‌ಗಳಲ್ಲಿ ಬಂದು ಲಸಿಕಾ ಶಿಬಿರವನ್ನು ಹಮ್ಮಿಕೊಳ್ಳಬಹುದಾಗಿದ್ದು, ಈ ಬಗ್ಗೆ ತಮ್ಮನ್ನು ಸಂಪರ್ಕಿಸಲು ಕೋರಿದರು.

**2. ಘನತ್ಯಾಜ್ಯ ನಿರ್ವಹಣೆ ಬಗ್ಗೆ**

i) **ಹಿಮಗಿರಿ ಮೆಡೋಸ್:-** ಬಡಾವಣೆಗೆ ಬರುವ ದಾರಿಯಲ್ಲಿರುವ ತ್ಯಾಜ್ಯವನ್ನು ತೆರವುಗೊಳಿಸಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು. ಪ್ರತಿದಿನ ಆಟೋಟಿಪ್ಪರ್ ಅನ್ನು ಕಳುಹಿಸಲು ಕ್ರಮ ವಹಿಸುವುದಾಗಿ ಗುತ್ತಿಗೆದಾರರಿಗೆ ಸೂಚಿಸಲಾಯಿತು.

ii) **ಹರಿನಗರ:-** ಸಾರತಿ ರಸ್ತೆಯಲ್ಲಿದ್ದ ತ್ಯಾಜ್ಯವನ್ನು ತೆರವುಗೊಳಿಸಿರುವುದಾಗಿ ಆರೋಗ್ಯ ಪರಿವೀಕ್ಷಕರು ತಿಳಿಸಿದರು.

**3. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಸಂಬಂಧಿಸಿದ ವಿಷಯಗಳ ಬಗ್ಗೆ.**

i) ಪಂಚವಟಿ ಅಪಾರ್ಟ್ ಮೆಂಟ್ ಬಳಿ ದುರಸ್ಥಿಗೊಂಡಿದ್ದ ಟ್ರಾನ್ಸ್ ಫಾರ್ಮ ರ್ ನ್ನು ಸರಿ ಪಡಿಸಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆಸ್ಕಾಂ) ರವರು ತಿಳಿಸಿದರು.

ii) ಜೆ.ಪಿ.ನಗರ 9ನೇ ಹಂತ, 7ನೇ ಕ್ರಾಸ್ ನಲ್ಲಿ ಟಿ.ಸಿ. ನಂ 653 ಅನ್ನು ಬದಲಾಯಿಸಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆಸ್ಕಾಂ) ರವರು ತಿಳಿಸಿದರು.

iii) ಜಂಬು ಸವಾರಿ ದಿನ್ನೆ ಪುಟ್‌ಪಾತ್ ಮೇಲೆ ಇರುವ ಲೈಟ್ ಕಂಬವನ್ನು ಟ್ರಾಫಿಕ್ ಪೊಲೀಸ್ ಜೊತೆ ಜಾಗ ವೀಕ್ಷಿಸಿ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು.

**4. ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಿಸಿದ ವಿಷಯಗಳ ಬಗ್ಗೆ.**

ಸಹಾಯಕ ಕಾರ್ಯಪಾಲಕ ಅಭಿಯಂತರರು(ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಸಭೆಗೆ ಹಾಜರಾಗಿರುವುದಿಲ್ಲ. ಕಾರ್ಯದರ್ಶಿಗಳು ಈ ಸಂಬಂಧ ನೋಟೀಸ್ ಜಾರಿ ಮಾಡುವುದು. ದಿನಾಂಕ: 19.03.2022 ರಂದು ನಡೆದ ಸಭೆಯ ನಡವಳಿಗಳಲ್ಲಿ ಸೂಚಿಸಿರುವ ವಿಷಯಗಳ ಬಗ್ಗೆ ಅನುಪಾಲನ ವರದಿಯನ್ನು ಸಲ್ಲಿಸಲು ಹಾಗೂ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸಭೆಯಲ್ಲಿ ತಿಳಿಸಲಾಯಿತು.

**5. ಕಾನೂನು ಮತ್ತು ಸುವ್ಯವಸ್ಥೆ**

i) ಸೌತ್ ಅವಿನ್ಯೂ ಲೇ ಔಟ್ ನಲ್ಲಿ ಆಗುತ್ತಿರುವ ಕಳ್ಳತನದ ಬಗ್ಗೆ ಕ್ರಮ ತೆಗೆದುಕೊಳ್ಳಲು ಪೊಲೀಸ್ ಸಬ್ ಇನ್ಸ್ ಪೆಕ್ಟರ್‌ಗೆ ಸೂಚಿಸಲಾಯಿತು.

ii) ಹಿಮಗಿರಿ ಮೆಡೋಸ್ ಅಧ್ಯಕ್ಷರು ತಮ್ಮ ಬಡಾವಣೆಯಲ್ಲಿ ನಡೆದ ಕಳ್ಳತನದ ಎಫ್ ಐ ಆರ್ ದಾಖಲು ಮಾಡಲು ಹುಳಿಮಾವು ಪೊಲೀಸ್ ಠಾಣೆಯಲ್ಲಿ ಸಮಸ್ಯೆಯಾಗಿರುವ ಬಗ್ಗೆ ತಿಳಿಸಿದರು. ಈ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವರು ಸದರಿ ಠಾಣೆಯೊಂದಿಗೆ ಕ್ರಮ ವಹಿಸುವುದಾಗಿ ತಿಳಿಸಿದರು.

—ಮು.ತಿ.ನೋ—

Scanned by CamScanner

6. ವಾರ್ಡ್ ಕಾಮಗಾರಿಗಳು

i) 2020–21 ನೇ ಸಾಲಿನಲ್ಲಿ ಹಂಚಿಕೆ ಆದ ರೂ.60 ಲಕ್ಷಗಳು ಕಾಮಗಾರಿಗಳ ಪ್ರಗತಿಯನ್ನು ಮುಂದಿನ ಸಭೆಯಲ್ಲಿ ವಾರ್ಡ್ ಅಭಿಯಂತರರು ಮಾಹಿತಿ ನೀಡುವುದು.

ii) 2021–22 ನೇ ಸಾಲಿನಲ್ಲಿ ಕೈ ಗೊಳ್ಳಬೇಕಾದ ಕಾಮಗಾರಿಗಳನ್ನು ಮುಂದಿನ ಸಭೆಯಲ್ಲಿ ಚರ್ಚಿಸುವುದು.

ಈ ಮೇಲೆ ತಿಳಿಸಿರುವ ಎಲ್ಲಾ ವಿಷಯ / ಸಮಸ್ಯೆಗಳ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮವಹಿಸಲು ಹಾಗೂ ಮುಂದಿನ ಸಭೆಗೆ ಅನುಪಾಲನಾವರದಿಯೊಂದಿಗೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಾಗಲು ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194, ಗೊಟ್ಟಿಗೆರೆ.

**ಪ್ರತಿಯನ್ನು:–**

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ),ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
8. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
9. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
10. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
11. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ
12. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
13. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
14. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
15. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
16. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ.
17. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
18. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
19. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.
20. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
21. ಪೋಲೀಸ್ ಇನ್ಸಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.
22. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.
23. ಸ್ಥಳೀಯ ನಾಗರಿಕಕಲ್ಯಾಣ ಸಂಸ್ಥೆಗಳು.

Scanned by CamScanner